<u>ದಿನಾಂಕಃ **03/02/2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>

<u>ಪಾಟೀ ಸವಾಲುಃ ವಾದಿಯರ ಪರವಾಗಿ ಶ್ರೀ ಹೆಚ್ ಎಸ್ ಎಂ ಎಂ ವಕೀಲರಿಂದಃ</u>

1. ವಾದಿಯರ ಪರಿಚಯ ಇರುತ್ತದೆ. 1ನೇ ಪ್ರತಿವಾದಿ ಸುಶೀಲಮ್ಮ ನನ್ನ ದೊಡ್ಡಪ್ಪನ ಹೆಂಡತಿ. 2ನೇ ಪ್ರತಿವಾದಿ ರಾಜಣ್ಣ ನನಗೆ ಅಣ್ಣ ಆಗಬೇಕು, 3ನೇ ಪ್ರತಿವಾದಿ ಪದ್ಮಮ್ಮ ನನ್ನ ದೊಡ್ಡಮ್ಮ, 4ನೇ ಪ್ರತಿವಾದಿ ಲೋಕೇಶ ರವರು 3ನೇ ಪ್ರತಿವಾದಿಯ ಮಗ. ನನ್ನ ತಾಯಿಯ ಹೆಸರು ಜಯಲಕ್ಷ್ಮೀ. 5ನೇ ಪ್ರತಿವಾದಿ ಲಕ್ಷ್ಮೀ, 6ನೇ ಪ್ರತಿವಾದಿ ಸುಶೀಲ ಅವರು ನನ್ನ ದೊಡ್ಡಪ್ಪ ಶಿವಣ್ಣರವರ ಇಬ್ಬರು ಹೆಂಡತಿಯರು. 8ನೇ ಪ್ರತಿವಾದಿ ಮಲ್ಲೇಶ ರವರು ನನ್ನ ತಂದೆ. ನನ್ನ ತಂದೆ ಈ ದಾವೆಯನ್ನು ನಡೆಯುತಿದ್ದ ವೇಳೆಯಲ್ಲಿ ತೀರಿಕೊಂಡಿರುತ್ತಾರೆ. ವಾದಿಯರು ದಾಖಲಿಸಿರುವ ಈ ದಾವೆಯ ವಾದ ಪತ್ರವನ್ನು ಓದಿ ತಿಳಿದುಕೊಂಡಿದ್ದೇನೆ. ನಾನು Diploma Civil ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಈಗ ವ್ಯವಸಾಯ ಮಾಡುತಿದ್ದೇನೆ. 1ನೇ ವಾದಿ ಹನುಮಮ್ಮ ರವರ ಮಾವನ ಹೆಸರು ಗಂಗೇಗೌಡ. ಸದರಿ ಗಂಗೇಗೌಡರಿಗೆ ಮೊದಲನೇ ಹೆಂಡತಿ ಮಗನ ಹೆಸರು ಜವರಪ್ಪ ಅಂದರೆ ಅವರು ವಾದಿಯ ಗಂಡ. ಗಂಗೇಗೌಡರ 2ನೇ ಹೆಂಡತಿ ಮಾಳಮ್ಮ ರವರಿಗೆ 6 ಜನ ಮಕ್ಕಳು. ಗಂಗೇಗೌಡರು 1982 ರಲ್ಲಿ ತೀರಿಕೊಂಡಿರುತ್ತಾರೆ. ಜವರಪ್ಪ ರವರು ವ್ಯವಸಾಯ ಮಾಡುತಿದ್ದರು. ಗಂಗೇಗೌಡ ನನ್ನ ತಾತ, ಅವರಿಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿಗಳು ಎಷ್ಟು ಇದ್ದವು ಎಂದು ಹೇಳಲು ಆಗುವುದಿಲ್ಲ. ದಾವಾ ಸ್ವತ್ತುಗಳು 3 ಸ್ವತ್ತುಗಳು ಇದ್ದು ಅವುಗಳನ್ನು ನಾನು ನೋಡಿದ್ದೇನೆ. ದಾವಾ ಸ್ವತ್ತುಗಳಲ್ಲೆವೂ ನನ್ನ ತಾತ ಗಂಗೇಗೌಡರಿಗೆ Land reforms ಅಡಿಯಲ್ಲಿ ಗೇಣಿ ಮೂಲಕ ಬಂದ ಸ್ವತ್ತುಗಳಾಗಿರುತ್ತವೆ. ದಾವಾ ಸ್ವತ್ತುಗಳಲ್ಲೆವೂ ಮೊದಲಿಗೆ ಸೆಲ್ವಪಿಳ್ಳೆಅಯ್ಯಂಗಾರ ರವರಿಗೆ ಸೇರಿದ ಸ್ವತ್ತುಗಳಾಗಿದ್ದವು.

2. ಈ ಹಿಂದೆ ವಾದಿಗಳು ದಾಖಲಿಸಿದ್ದ ಅಸಲು ದಾವಾ ನಂ.131/2015 ರ ದಾವೆ ನಡೆಯುತಿತ್ತು. ಆ ದಾವೆಯಲ್ಲಿ ಪಿತ್ರಾರ್ಜಿತ ಆಸ್ತಿಗಳು ಹಾಗೂ ದಾವಾ ಸ್ವತ್ತುಗಳನ್ನು ಷೆಡ್ಯೂಲ್ ನಲ್ಲಿ ತೋರಿಸಿ ಭಾಗ ಬರಬೇಕೆಂದು ದಾವಾ ನಂ.131/2015 ರಲ್ಲಿ ತೋರಿಸಲಾಗಿತ್ತು ಎಂದರೆ ಸರಿ. ಆ ದಾವೆಯಲ್ಲಿ ನನ್ನ ತಂದೆಯವರು ಪ್ರತಿವಾದ ಪತ್ರವನ್ನು ಸಲ್ಲಿಸಿದ್ದರು. ಆ ಪ್ರತಿವಾದ ಪತ್ರದಲ್ಲಿ ನನ್ನ ತಂದೆಯವರು ಜವರಪ್ಪರವರಿಗೆ ಪಿತ್ರಾರ್ಜಿತ ಆಸ್ತಿಗಳಲ್ಲಿ ಈಗಾಗಲೇ ಭಾಗ

ನೀಡಲಾಗಿದೆ ಎಂದು ಪ್ರತಿವಾದ ಪತ್ರ ಸಲ್ಲಿಸಿದ್ದರು ಎಂದರೆ ಸರಿ. ನಿಡಿ-1 ರ ವಿಭಾಗ ಪತ್ರದ ಪ್ರಕಾರ ಒಂದು ವಾಸದ ಮನೆ ಹಾಗೂ 2 ಜಮೀನುಗಳನ್ನು ಜವರಪ್ಪ ರವರಿಗೆ ನೀಡಲಾಗಿತ್ತು ಎಂದರೆ ಸರಿ. ಜವರಪ್ಪ ರವರಿಗೆ ನಿಡಿ-1 ರ ವಿಭಾಗ ಪತ್ರದ ಪ್ರಕಾರ ನೀಡಿದಂತಹ ಆಸ್ತಿಗಳನ್ನು ಹೊರತುಪಡಿಸಿ ಇತರೆ ಆಸ್ತಿಗಳು ನನ್ನ ತಾತ ಗಂಗೇಗೌಡರ ಹೆಸರಿನಲ್ಲಿ ಇದ್ದವು ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ಆ ವಿಭಾಗದ ನಂತರ ಸೆಲ್ವಪಿಳ್ಳೈಅಯ್ಯಂಗಾರ ರವರಿಂದ ದಾವಾ ಆಸ್ತಿಗಳನ್ನು ನನ್ನ ತಾತ 1959 ರಲ್ಲಿ ಗುತ್ತಿಗೆಗೆ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿ ಗುತ್ತಿಗೆ ಪಡೆದ ಬಗ್ಗೆ ಸಂಬಂಧಪಟ್ಟ ದಾಖಲಾತಿಗಳು ಹಾಗೂ ಗುತ್ತಿಗೆಗೆ ಸಂಬಂಧ ನೀಡಿದ ಅರ್ಜಿಗಳು, ಪಹಣಿ ಪತ್ರಿಕೆಗಳೆಲ್ಲವೂ ನನ್ನ ಬಳಿ ಇರುತ್ತವೆ. ಆ ದಾಖಲಾತಿಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ. ನಿಡಿ-5 ರ ವಿಭಾಗ ಪತ್ರದಂತೆ ನನ್ನ ತಾತ ಹೆಸರಿನಲ್ಲಿದ್ದ ಜಮೀನುಗಳನ್ನು ನನ್ನ ದೊಡ್ಡಪ್ಪ ನಿಂಗಪ್ಪ ರವರಿಗೆ ವಿಭಾಗ ಮಾಡಿ ನೀಡಿಲಾಗಿದೆ. 1974 ರಲ್ಲಿ ನಿಂಗಪ್ಪ ರವರಿಗೆ ಆಸ್ತಿಗಳನ್ನು ನೀಡಿದ ನಂತರ ನನ್ನ ತಂದೆಯವರಿಗೆ ಯಾವುದೇ ಆಸ್ತಿಗಳು ಉಳಿದಿರಲಿಲ್ಲ. ಈ ವಿಷಯಗಳನ್ನೆಲ್ಲಾ ಅಸಲು ದಾವಾ ನಂ.131/2015 ರಲ್ಲಿ ನನ್ನ ತಂದೆ ಸಲ್ಲಿಸಿದ್ದ ಪ್ರತಿವಾದ ಪತ್ರದಲ್ಲಿ ಹೇಳಲಾಗಿತ್ತು. ನಿಡಿ-5 ರ ವಿಭಾಗ ಪತ್ರಕ್ಕೆ ನನ್ನ ತಾತ ಗಂಗೇಗೌಡರ 2ನೇ ಹೆಂಡತಿಯ ಗಂಡು ಮಕ್ಕಳೆಲ್ಲಾ ಸಹಿ ಮಾಡಿ ಕೊಟ್ಟಿರುತ್ತಾರೆ. ನಿಡಿ-7 ರ ತೀರ್ಪು ಹಾಗೂ ಡಿಕ್ರಿಯ ಪ್ರತಿಯಾಗಿದ್ದು ಆ ಪ್ರಕರಣದಲ್ಲಿ ವಾದಿಗಳು ಪಕ್ಷಗಾರರಾಗಿರಲಿಲ್ಲ. ನಿಡಿ-7 ರ ತೀರ್ಪು ಆದ ಸಂಧರ್ಭದಲ್ಲಿ ನನ್ನ ತಾತ ತೀರಿಕೊಂಡಿದ್ದರು. ನಿಡಿ-1 ಮತ್ತು 5 ರಲ್ಲಿರುವ ದಾಖಲಾತಿಗಳಲ್ಲಿ ದಾವಾ ಆಸ್ತಿಗಳು ಸೇರಿಲ್ಲ ಎಂದರೆ ಅವು ದಾವಾ ಸ್ವತ್ತುಗಳು ನಮ್ಮ ತಾತನ ಮಾಲಿಕತ್ವಕ್ಕೆ ಬಂದಿರಲಿಲ್ಲ ಎಂದು ನುಡಿಯುತ್ತಾರೆ. ನನ್ನ ತಾತ ಗಂಗೇಗೌಡರು ಯಾವುದೇ ವಿಲ್ ಪತ್ರ ಬರೆದಿರುವುದಿಲ್ಲ. ಗಂಗೇಗೌಡರು ತೀರಿಕೊಂಡ ನಂತರ ಅವರ 2ನೇ ಹೆಂಡತಿ ಮಾಳಮ್ಮ ರವರ ಹೆಸರಿನಲ್ಲಿ ಸ್ವತ್ತುಗಳ ಖಾತೆ ವರ್ಗಾವಣೆಯಾಗಿರುತ್ತದೆ. ಮಾಳಮ್ಮ ರವರಿಗೆ ಖಾತೆ ವರ್ಗಾವಣೆಯಾಗುವ ವೇಳೆಯಲ್ಲಿ ನಾನು ಜನಿಸಿರಲಿಲ್ಲ. ಆ ರೀತಿ ಖಾತಾ ವರ್ಗಾವಣೆಯಾದ ಬಗ್ಗೆ ನನಗೆ ನನ್ನ ತಂದೆ ತಿಳಿಸಿರುತ್ತಾರೆ. ನನ್ನ ತಂದೆ ಆ ರೀತಿ ಖಾತಾ ವರ್ಗಾವಣೆಯಾದ ಬಗ್ಗೆ ಯಾವುದೇ ದಾಖಲಾತಿಯನ್ನು ತೋರಿಸಿರಲಿಲ್ಲ.

3. 1975 ನೇ ಸಾಲಿನಲ್ಲಿ ಐಟಂ ನಂ.1 ರ ಸ್ವತ್ತಿನ ಹಕ್ಕುದಾರಿಕೆಯು ನನ್ನ ತಾತನಿಗೆ ಬಂದಿರುತ್ತದೆ. 1976 ನೇ ಸಾಲಿನಲ್ಲಿ ಐಟಂ ನಂ.2 ಮತ್ತು 3 ರ ಸ್ವತ್ತಿನ ಹಕ್ಕುದಾರಿಕೆಯು ನನ್ನ ತಾತನಿಗೆ ಬಂದಿರುತ್ತದೆ. ಮೊದಲನೇ ವಾದಿಯ ಗಂಡ ಜವರಪ್ಪ ನವರು ದಿಃ 06-11-1999 ರಂದು ನಿಧನರಾಗಿರುತ್ತಾರೆ. ನಿಡಿ-9 ರ order sheet ನ ಪ್ರತಿಯು C.C.No.144/1989 ರ ಪ್ರಕರಣ ಆಗಿದ್ದು ಆ ಪ್ರಕರಣದಲ್ಲಿ ಜವರಪ್ಪ ರವರು ಸಾಕ್ಷಿದಾರರಾಗಿರಲಿಲ್ಲ. ಸಾಕ್ಷಿದಾರರು ಮುಂದುವರೆದು ಆ ಪ್ರಕರಣದಲ್ಲಿ ಜವರಪ್ಪ ರವರು ಸಾಕ್ಷಿದಾರರಾಗಿ ಬರಲು ಅವರಿಗೆ ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ. CC.No.144/1989 ರ charge sheet ಪ್ರತಿ ನಮ್ಮ ಬಳಿ ಇರುವುದಿಲ್ಲ.

ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಸಹಿ/-

(ನಾಗೇಶ ಮೂರ್ತಿ ಬಿ.ಕೆ)

ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅರಕಲಗೂಡು